C.C– 227/2018
ಡಿ. ಡಬ್ಲೂ – 1

ಸಾಕ್ಷಿಯನ್ನು ದಿಃ 15.06.2026 ರಂದು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಫಿರ್ಯಾದಿಯ ಪರ ವಕೀಲರಾದ ಶ್ರೀ. ಸಿ.ಎಸ್ ರವರಿಂದಃ**

**1.** ನಾನು ವಿಗ್ರಹಗಳನ್ನು ಪಿಓಪಿಯಿಂದ ಮಾಡುತ್ತಿದ್ದೆ. ಪಿಓಪಿ ಅನ್ನು ಖರೀದಿ ಮಾಡಿದ ಬಗೆಗಿನ ಬಿಲ್ಲುಗಳು ನನ್ನ ಬಳಿ ಇವೆ. ಅದನ್ನು ನ್ಯಾಯಾಲಯದ ಮುಂದೆ ಹಾಜರು ಪಡಿಸಿಲ್ಲ. ಫಿರ್ಯಾದುದಾರರಿಗೆ ವಿಗ್ರಹಗಳನ್ನು ಮಾಡಿ ಕೊಡಲು ಕಚ್ಚಾ ಸಮಾಗ್ರಿಗಳನ್ನು ಖರೀದಿ ಮಾಡಿದ ಬಗ್ಗೆ ದಾಖಲೆಗಳನ್ನು ಹಾಜರು ಪಡಿಸಿಲ್ಲ ಎಂದರೆ ಸರಿ. ನನ್ನ ವ್ಯವಹಾರಕ್ಕೆ ಸಂಬಂಧಪಟ್ಟ ಎಲ್ಲಾ ದಾಖಲೆಗಳನ್ನು ನಾನು ನಿರ್ವಹಣೆ ಮಾಡುತ್ತಾ ಬಂದಿದ್ದು, ಅವುಗಳನ್ನು ಸಹ ನ್ಯಾಯಾಲಯದ ಮುಂದೆ ಹಾಜರು ಪಡಿಸಿಲ್ಲ. ಫಿರ್ಯಾದುದಾರರಿಗೆ ಹಂತ ಹಂತವಾಗಿ ನಾನು ವಿಗ್ರಹಗಳನ್ನು ಕೊಟ್ಟಿದ್ದೇನೆ. ಫಿರ್ಯಾದಿಯು ನನಗೆ ಒಮ್ಮೆ 4,90,000/– ರೂ.ಗಳನ್ನು ಕೊಟ್ಟನು.

**2.** ದಿನಾಂಕ 03.07.2015 ರಂದು ಮಾಸಿಕ ಶೇಕಡಾ 1 ರಂತೆ ಬಡ್ಡಿಯನ್ನು ನೀಡುವುದಾಗಿ ಒಪ್ಪಿ ಸಾಕ್ಷಿದಾರರ ಸಮಕ್ಷಮ ಪ್ರೊನೋಟ್ ಅನ್ನು ಬರೆದುಕೊಟ್ಟು ಫಿರ್ಯಾದಿಯಿಂದ 7,50,000/– ರೂ.ಗಳನ್ನು ನಾನು ಸಾಲವಾಗಿ ಪಡೆದುಕೊಂಡಿದ್ದೆ ಎಂದರೆ ಸರಿಯಲ್ಲ. ಆ ಹಣವನ್ನು ಫಿರ್ಯಾದಿಯು ಕೇಳಿದಾಗ ದಿನಾಂಕ 27.11.2017 ರಂದು ದಿನಾಂಕ 29.11.2017 ರಂದು ನಗದೀಕರಣವಾಗುವಂತೆ ಮುಂದಿನ ದಿನಾಂಕವನ್ನು ನಮೂದಿಸಿ ನಿಪಿ–1 ರ ಚೆಕ್ಕನ್ನು ನಾನು ಫಿರ್ಯಾದಿಯ ಪರವಾಗಿ ನೀಡಿದ್ದೇನೆ ಎಂದರೆ ಸರಿಯಲ್ಲ. ಫಿರ್ಯಾದಿಯು ನನ್ನ ಬಳಿ ಯಾವುದೇ ವಿಗ್ರಹಗಳನ್ನು ಖರೀದಿ ಮಾಡಿಲ್ಲ ಹಾಗೂ ಆ ಬಾಪ್ತು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ 4,90,000/– ರೂ.ಗಳನ್ನು ನನ್ನ ಖಾತೆಗೆ ವರ್ಗಾವಣೆ ಮಾಡಿಲ್ಲ ಎನ್ನುವುದು ಸರಿಯಲ್ಲ. ಫಿರ್ಯಾದುದಾರರಿಗೆ ಮರು ಪಾವತಿ ಮಾಡಬೇಕಾದ ಹಣದ ಬಾಧ್ಯತೆಯಿಂದ ತಪ್ಪಿಸಿಕೊಳ್ಳಲು ನನ್ನ ಬಳಿ ಇದ್ದ ನಿಪಿ–5 ರ ಬಿಲ್ ಪುಸ್ತಕವನ್ನು ದುರುಪಯೋಗ ಪಡಿಸಿಕೊಂಡು ಈ ಪ್ರಕರಣದಲ್ಲಿ ಹಾಜರು

ಪಡಿಸಿದ್ದೇನೆ ಎಂದರೆ ಸರಿಯಲ್ಲ. ನಿಪಿ–1 ರಲ್ಲಿ ಕಾಣಿಸಿದ ಹಣವನ್ನು ಫಿರ್ಯಾದಿಗೆ ನೀಡಲು ನಾನು ಬಾಧ್ಯಸ್ಥನು ಎನ್ನುವುದು ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಿಸಲಾಯ್ತು)

ಓದಿ ಹೇಳಿ ಕೇಳಿ ಸರಿ ಇದೆ

ಪ್ರಧಾನ ವ್ಯವಹಾರ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಸಾಗರ.